## ಉಪಾಧ್ಯಾಯರಿಗೆ ಪ್ರಶಸ್ತಿ ಪತ್ರ ವಿತರಣೆ

ಮೈಸೂರಿನ ರಾಮಕೃಷ್ಣ ಆಶ್ರಮದ ಆಶ್ರಯದಲ್ಲಿ ನಡೆಯುತ್ತಿರುವ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ನವೋದಯ ಕೇಂದ್ರದ ಉಪಾಧ್ಯಾಯರುಗಳಿಗಾಗಿ ಮೌಲ್ಯಶಿಕ್ಷಣ ಕುರಿತು ೩೦ ದಿನಗಳ ತರಬೇತಿ ಕೋರ್ಸ್‌ನಲ್ಲಿ ಸುಮಾರು ೨೧ ಉಪಾಧ್ಯಾಯರು ಭಾಗವಹಿಸಿದ್ದರು. ಆ ಕೋರ್ಸ್‌ನ ಮುಕ್ತಾಯ ಸಮಾರಂಭದಲ್ಲಿ ಕರ್ನಾಟಕದ ಮಾನ್ಯ ರಾಜ್ಯಪಾಲರಾದ ಶ್ರೀಯುತ ಟಿ.ಎನ್.ಚತುರ್ವೇದಿಯವರು ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.

## ಜ್ಞಾನವಾಹಿನಿ ಕಾರ್ಯಕ್ರಮ

ಮೈಸೂರು ರಾಮಕೃಷ್ಣ ಆಶ್ರಮದಿಂದ ಹಮ್ಮಿಕೊಳ್ಳಲಾಗಿರುವ ಜ್ಞಾನವಾಹಿನಿ ಕಾರ್ಯಕ್ರಮವು ಏಪ್ರಿಲ್ ಹಾಗೂ ಮೇ ತಿಂಗಳುಗಳಲ್ಲಿ ಮೈಸೂರು ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ತನ್ನ ಕಾರ್ಯಕ್ರಮವನ್ನು ಮುಂದುವರಿಸಿತು.

ಜೂನ್ ೭ರಿಂದ ಮಂಡ್ಯ ಜಿಲ್ಲೆಯಲ್ಲಿ ಜ್ಞಾನವಾಹಿನಿ ಸಂಚಾರಿ ವಾಹನ ಸಂಚರಿಸುತ್ತಲಿದ್ದು ಜುಲೈ ೧೦ನೇ ತಾರೀಖಿನವರೆಗೂ ಆ ಜಿಲ್ಲೆಯಲ್ಲಿಯೇ ಕಾರ್ಯಕ್ರಮಗಳು ನಡೆಯುತ್ತವೆ. ಕಾರ್ಯಕ್ರಮದ ವಿವರಗಳನ್ನು ಪಿ.ಬಿ. ನಾಗರಾಜು, ಫೋನ್. ನಂ. 0821-220918 ಇವರಿಂದ ಪಡೆಯಬಹುದು.

ಜುಲೈ ೧೧ರಿಂದ ಬೆಂಗಳೂರು ದಕ್ಷಿಣ ವಲಯದ ಗ್ರಾಮಾಂತರ ಪ್ರದೇಶದಲ್ಲಿ ಕಾರ್ಯಕ್ರಮವು ನಡೆಯಲಿದೆ. ಬೆಂಗಳೂರು ಜಿಲ್ಲೆಯಲ್ಲಿ ನಡೆಯಲಿರುವ ಕಾರ್ಯಕ್ರಮಗಳ ವಿವರಗಳನ್ನು ಜಿಗಣಿಯಲ್ಲಿರುವ ಶ್ರೀಯುತ ವಿ. ಷಣ್ಮುಗಂ, ಫೋನ್ ನಂ. 080-7825383 ಇವರಿಂದ ಪಡೆಯಬಹುದು.

"ವಿವೇಕಪ್ರಭ" ಪತ್ರಿಕೆಯ ಸ್ಥಳೀಯ ಚಂದಾದಾರರೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ವಿನಂತಿ.

## ವಿವೇಕಾನಂದ ಕಿಶೋರ ಕೇಂದ್ರ

ಗ್ರಾಮಾಂತರ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳಲ್ಲಿ ಸರ್ವತೋಮುಖ ವ್ಯಕ್ತಿತ್ವ ವಿಕಸನಕ್ಕಾಗಿ ಜ್ಞಾನವಾಹಿನಿ ಕಾರ್ಯಕ್ರಮವನ್ನು ವಿಸ್ತರಿಸುವ ಒಂದು ನಮ್ಮ ಪ್ರಯತ್ನವೇ ವಿವೇಕಾನಂದ ಕಿಶೋರ ಕೇಂದ್ರ. ಈಗಾಗಲೇ ಜ್ಞಾನವಾಹಿನಿ ಕಾರ್ಯಕ್ರಮ ನಡೆದ ಗ್ರಾಮಗಳಲ್ಲಿ ಕಿಶೋರ ಕೇಂದ್ರಗಳನ್ನು ಆರಂಭಿಸಿ **ಸ್ವಾಮಿ ವಿವೇಕಾನಂದರ ಜೀವನ ಸಂದೇಶಗಳು ಬಾಲಕರ ನರನಾಡಿಗಳಲ್ಲಿ ಸಂಚರಿಸಿ, ಸಚೇತನವಾಗಿ ವರ್ಧಿಸಲು ಅವಕಾಶಗಳನ್ನು ಕಲ್ಪಿಸುವ** ಉದ್ದೇಶದಿಂದ ಗ್ರಾಮವಾಸಿಗಳ ಸಹಯೋಗದಿಂದ ಈ ಕಿಶೋರ ಕೇಂದ್ರಗಳ ಪ್ರಯೋಗವನ್ನು ಕೈಗೊಳ್ಳಲಾಗಿದೆ. ಕಿಶೋರ ಕೇಂದ್ರ ನಡೆಸಲು ಆಸಕ್ತಿ ತೋರಿರುವ ವಿವಿಧ ಗ್ರಾಮಗಳ ೩೪ ಯುವಕರಿಗಾಗಿ ಮೈಸೂರಿನ ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಜೂನ್ ೭ರಿಂದ ಐದು ದಿನಗಳ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರಾರ್ಥಿಗಳಿಗೆ ಕಿಶೋರ ಕೇಂದ್ರದ ವ್ಯಾಪ್ತಿ, ಮಹತ್ವಗಳನ್ನು ಕುರಿತು ಆಶ್ರಮದ ಸ್ವಾಮೀಜಿಯವರಿಂದ ಮತ್ತು ಈ ಕ್ಷೇತ್ರದಲ್ಲಿ ನುರಿತವರಿಂದ ಪ್ರವಚನಗಳು ಹಾಗೂ ತರಬೇತಿಗಳನ್ನು ಏರ್ಪಡಿಸಲಾಗಿತ್ತು. ೧೫ ಗ್ರಾಮಗಳಲ್ಲಿ, ವಾರದಲ್ಲಿ ಒಂದು ದಿನ ನಡೆಯುವ ಕಿಶೋರ ಕೇಂದ್ರಗಳನ್ನು ಗುರುಪೂರ್ಣಿಮಾಪರ್ವದಿಂದ ಪ್ರಾರಂಭಿಸಲು ತೀರ್ಮಾನಿಸಲಾಯಿತು ಹಾಗೂ ಅದಕ್ಕೆ ಬೇಕಾಗುವ ಪುಸ್ತಕಗಳು ಮತ್ತು ಇತರ ವಸ್ತುಗಳನ್ನು ಶಿಬಿರಾರ್ಥಿಗಳಿಗೆ ವಿತರಿಸಲಾಯಿತು.

## ರಾಮಕೃಷ್ಣ ಮಠ, ಅಲಸೂರಿನಲ್ಲಿ ಆಧ್ಯಾತ್ಮಿಕ ಶಿಬಿರಗಳು

ಬೆಂಗಳೂರಿನಲ್ಲಿರುವ ಅಲಸೂರು ರಾಮಕೃಷ್ಣ ಮಠದಲ್ಲಿ ವಿದ್ಯಾರ್ಥಿಗಳಿಗಾಗಿ ಬೇಸಿಗೆ ಶಿಬಿರಗಳನ್ನೂ ಮತ್ತು ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜಯಂತಿಯ ಪ್ರಯುಕ್ತ ವಿಶೇಷ ಆಧ್ಯಾತ್ಮಿಕ ಶಿಬಿರವನ್ನೂ ಏರ್ಪಡಿಸಲಾಗಿತ್ತು.

ಯುವ ವಿದ್ಯಾರ್ಥಿಗಳಿಗಾಗಿ ಶಿಬಿರಗಳನ್ನು ಎರಡು ತಂಡಗಳಲ್ಲಿ ಆಯೋಜಿಸಲಾಗಿತ್ತು. ಶಿಬಿರದ ಕಾರ್ಯಕ್ರಮಗಳಲ್ಲಿ ಮುಖ್ಯವಾಗಿ ಯೋಗಾಭ್ಯಾಸ, ನೈತಿಕ ಮೌಲ್ಯಗಳ ಬಗ್ಗೆ ತರಗತಿಗಳು, ಭಜನೆಯ ತರಗತಿಗಳು ಹಾಗೂ ಸಿ.ಡಿ.ಪ್ರದರ್ಶನಗಳು ಇದ್ದವು. ರಾಮಾಯಣ, ದಿವ್ಯತ್ರಯರ ಜೀವನ ಉಪದೇಶಗಳು ಮತ್ತು ಆಧುನಿಕ ವೈಜ್ಞಾನಿಕ ವಿಷಯಗಳ ಬಗ್ಗೆ ಪರಿಣತರಿಂದ ವಿಚಾರಪೂರ್ಣ ಉಪನ್ಯಾಸಗಳಿದ್ದವು. ಶಿಬಿರಾರ್ಥಿಗಳ ಪ್ರತಿಭೆಗೆ ಅವಕಾಶವೀಯುವ ಪ್ರಬಂಧಸ್ಪರ್ಧೆ, ಕ್ವಿಜ್, ಪ್ರಶ್ನೋತ್ತರಗಳು, ಚಿತ್ರಕಲಾಸ್ಪರ್ಧೆ ಮುಂತಾದವುಗಳಿದ್ದವು. ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದ ಬೆಂಗಳೂರು ವಲಯದ ಡೆಪ್ಯೂಟಿ ಕಮೀಷನರ್ ಶ್ರೀ ಚಂದ್ರಶೇಖರ್, ಐ.ಪಿ.ಸ್., ಅವರು ಶಾಲಾಶಿಕ್ಷಣದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಒತ್ತಡದ ಕುರಿತು ಮಾತನಾಡಿದರು. ಅಂತಹ ವಿದ್ಯಾರ್ಥಿಗಳಿಗೆ ಇತರೆ ಕ್ಷೇತ್ರಗಳಲ್ಲಿ ತಮ್ಮ ಸ್ವಂತ ಪ್ರತಿಭೆಗಳನ್ನು ಗುರುತಿಸಿಕೊಳ್ಳಲು ಅವಕಾಶ ಮಾಡಿಕೊಡುವ ಅಗತ್ಯವಿದೆ ಎಂದು ನುಡಿದರು.

ಇದೇ ಮಠದ ಆಶ್ರಯದಲ್ಲಿ ಮಕ್ಕಳಿಗಾಗಿ ಗಾಯನ ಮತ್ತು ವಾದ್ಯ ಸಂಗೀತಗಳ ಸ್ಪರ್ಧೆ ಜರುಗಿತು. ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕದ ಕಲಾತಿಲಕ ಬಿರುದಿನ ಶಿವಮೊಗ್ಗ ಸುಬ್ಬಣ್ಣನವರು ಸುಗಮಸಂಗೀತವನ್ನು ತಾವೇ ಹಾಡಿ ಅದರ ಪ್ರಾಮುಖ್ಯತೆಯನ್ನು ವಿವರಿಸಿದರು. ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಸುಮಾರು ೪೫೦ ಮಕ್ಕಳು ವಿವಿಧ ರಾಗಗಳಲ್ಲಿ ಹಾಡಿ, ಹಾಗೂ ವಿವಿಧ ವಾದ್ಯಗಳನ್ನು ನುಡಿಸಿ ಕಾರ್ಯಕ್ರಮಕ್ಕೆ ಕಳೆಯನ್ನು ನೀಡಿದರು. ಕಾರ್ಯಕ್ರಮದ ಅಂತ್ಯದಲ್ಲಿ ಅತಿಥಿಗಳಿಂದ ಮಕ್ಕಳಿಗೆ ಬಹುಮಾನ ವಿತರಣೆಯಿತ್ತು.

ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜಯಂತಿಯ ಪ್ರಯುಕ್ತ ಆಶ್ರಮದ ವತಿಯಿಂದ ಭಕ್ತಾದಿಗಳಿಗಾಗಿ ಮೇ ೨೭ರಿಂದ ನಾಲ್ಕು ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಕೋಲಾರ ಜಿಲ್ಲೆಯ ಕೈವಾರದಲ್ಲಿ ಏರ್ಪಡಿಸಲಾಗಿತ್ತು. ರಾಮಕೃಷ್ಣ ಮಠದ ವಿವಿಧ ಶಾಖೆಗಳಿಂದ ಆಗಮಿಸಿದ್ದ ಸಂನ್ಯಾಸಿಗಳು ಶಿಬಿರದಲ್ಲಿ ಭಜನೆ, ಪ್ರವಚನ, ಹಾಗೂ ಧ್ಯಾನದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಸುಮಾರು ೧೬೦ ಭಕ್ತಾದಿಗಳಿದ್ದ ಈ ಶಿಬಿರದಲ್ಲಿ ಧ್ಯಾನಕ್ಕೆ ಹೆಚ್ಚು ಮಹತ್ವವನ್ನು ಕೊಡಲಾಗಿದ್ದು—"ಆಧ್ಯಾತ್ಮಿಕ ಸಾಧನೆಯಲ್ಲಿ ಧ್ಯಾನದ ಮಹತ್ವ" "ಧ್ಯಾನ ಮತ್ತು ಏಕಾಗ್ರತೆ" "ಧ್ಯಾನಕ್ಕೆ ಮಾಡಿಕೊಳ್ಳಬೇಕಾದ ಸಿದ್ಧತೆಗಳೇನು?" "ಧ್ಯಾನಕ್ಕೆ ಶ್ರೀರಾಮಕೃಷ್ಣರು ಕೊಟ್ಟಿರುವ ಮಹತ್ವ"—ಮುಂತಾದ ವಿಷಯಗಳ ಕುರಿತು ಬೋಧಪ್ರದವಾದ ಪ್ರವಚನಗಳಿದ್ದವು.